**ದಿಃ11.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-**ವಾದಿ ಪರ ಶ್ರೀ.ಡಿ .ಡಿ. ಬಿ. ವಕೀಲರಿಂದಃ-

ಈಗ ಸಾಕ್ಷಿಗೆ ಸರ್ವೆ ನಂಬರ್ 59/ಎ ನೇದ್ದರ ಸನ್ 1977-78, 1982-83 ಪಹಣಿಗಳನ್ನು ತೋರಿಸಿ , ಸದರಿ ಪಹಣಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನೋಡಿ ಗುರುತಿಸಿದ ಪಹಣಿಗಳನ್ನು ಕ್ರಮವಾಗಿ ನಿಪಿ **19** ಮತ್ತು **20** ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ ಸರ್ವೆ ನಂಬರ್ 59/ಪಿ ನೇದ್ದರ ಸನ್ 1987-88, 1992-93 ಮತ್ತು 1997-98 ಪಹಣಿಗಳನ್ನು ತೋರಿಸಿ , ಸದರಿ ಪಹಣಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಸಾಕ್ಷಿ ನೋಡಿ ಗುರುತಿಸಿದ ಪಹಣಿಗಳನ್ನು ಕ್ರಮವಾಗಿ ನಿಪಿ **21** ರಿಂದ **23** ಎಂದು ಗುರುತಿಸಲಾಯಿತು. ಸದರಿ ಪಹಣಿಗಳಂತೆ ನಮ್ಮ ತಂದೆ ಅಲ್ಲಾಭಕ್ಷಿ ಅವರ ಹೆಸರಿಗೆ 2 ಎಕರೆ 30 ಗುಂಟೆ ಈಗಲೂ ಇರುತ್ತದೆ ಎಂದರೆ ಸರಿ.

ಈಗ ಸಾಕ್ಷಿಗೆ 59/ಪಿ ಸಂಬಂದಿಸಿದ 1975-76, ರ ಪಹಣಿ ತೋರಿಸಿ ಸದರಿ ಪಹಣಿ ವಾದಿ ಖಾಜಾ ಹುಸೇನ್ ಅವರ ಹೆಸರಿಗೆ 2 ಎಕರೆ 37 ಗುಂಟೆ ಇರುತ್ತದೆ ಎಂದು ಸೂಚಿಸಿದಾಗ ಸಾಕ್ಷಿ ನೋಡಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ಒಪ್ಪಿದ ಪಹಣಿಯನ್ನು ನಿಪಿ **24** ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ 59/B ಸಂಬಂದಿಸಿದ ಸನ್ 1977-78, 1982-83 , 1987-88 ,1992-93 ಪಹಣಿಗಳನ್ನು ತೋರಿಸಿ ಸದರಿ ಪಹಣಿಗಳು ಕೂಡ ವಾದಿ ಖಾಜಾ ಹುಸೇನ್ ಅವರ ಹೆಸರಿಗೆ 2 ಎಕರೆ 37 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಯಾವ ಹಿಸ್ಸೆ ನಂಬರ್ ಗೋತ್ತಿರುವುದಿಲ್ಲ ಎಂದು ಹೇಳುತ್ತಾರೆ .

ಈಗ ಸಾಕ್ಷಿಗೆ 59/ಪಿ ಸಂಬಂದಿಸಿದ 1997-98, ರ ಪಹಣಿ ತೋರಿಸಿ ಸದರಿ ಪಹಣಿ ವಾದಿ ಖಾಜಾ ಹುಸೇನ್ ಅವರ ಹೆಸರಿಗೆ 2 ಎಕರೆ 37 ಗುಂಟೆ ಇರುತ್ತದೆ ಎಂದು ಸೂಚಿಸಿದಾಗ ಸಾಕ್ಷಿ ನೋಡಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ಒಪ್ಪಿದ ಪಹಣಿಯನ್ನು ನಿಪಿ **25** ಎಂದು ಗುರುತಿಸಲಾಯಿತು.

ದಿಃ 12.04.2000 ರಲ್ಲಿ ವಾದಿ ಖಾಜಾ ಹುಸೇನ್ ಮತ್ತು ಅವರ ಕುಟುಂಬದವರು ನೊಂದಾಯಿತ

ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ಸದರಿ ಪಾಲುವಿಭಾಗದಂತೆ ದಾವಾ ಆಸ್ತಿಯ ವಾದಿ ಖಾಜಾ ಹುಸೇನ್ ಅವರಿಗೆ ಪಾಲು ಬಂದಿರುತ್ತದೆ ಎಂದರೆ ಗೋತ್ತಿಲ್ಲ . ಸದರಿ ಪಾಲುವಿಭಾಗ ಮೂಲಕ ಬಂದ ಆಸ್ತಿಗಳಲ್ಲಿ ವಾದಿ ಖಾಜಾ ಹುಸೇನ್ ಅವರು ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿ ಜಾಲಿ ಮರ ಇರುತ್ತದೆ ಅದರ ಉತ್ತರ ಭಾಗಕ್ಕೆ ಮಾತ್ರ ವಾದಿ ಸ್ವಾಧೀನ ಇರುತ್ತಾರೆ ಎಂದು ಹೇಳುತ್ತಾರೆ . ಈಗಲೂ ಸಹ ವಾದಿ ಖಾಜಾ ಹುಸೇನ್ ಅವರು ಸಂಪೂರ್ಣ ದಾವಾ ಆಸ್ತಿ ವಿಸ್ತೀರ್ಣದಲ್ಲಿ ಸ್ವಾಧೀನ ಇರುತ್ತಾರೆ , ನಾನು ಹೇಳುವ ಹಾಗೆ ಜಾಲಿ ಮರ ಕೂಡ ವಾದಿ ಖಾಜಾ ಹುಸೇನ್ ಅವರಿಗೆ ಸೇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ನಿಡಿ 2 ಭಾವ ಚಿತ್ರದಲ್ಲಿ ಕಾಣುವ ಜಾಲಿ ಮರ ನಮಗೆ ಸೇರುತ್ತದೆ ಎಂದು ತೋರಿಸಲು ಸಕ್ಷಮ ಪ್ರಾಧಿಕಾರದಿಂದ ದೃಡೀಕರಣ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ . ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇದೇಯಾ ಎಂದರೆ ಸಾಕ್ಷಿ ಪೋಡು ಆಗಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ ಮರವು ನನ್ನದೇ ಎಂದು ತೋರಿಸಲು ಅರಣ್ಯ ಇಲಾಖೆಯಿಂದ ದಾಖಲೆ ಹಾಜರುಪಡಿಸುತ್ತೀರ ಎಂದರೆ ಸಾಕ್ಷಿ ಪೋಡು ಆಗದೆ ಇರುವ ಕಾರಣ ಹಾಜರುಪಡಿಸಲು ತೊಂದರೆ ಇರುತ್ತದೆ ಎಂದು ಹೇಳುತ್ತಾರೆ . ನಿಡಿ 2 ಭಾವ ಚಿತ್ರದಲ್ಲಿ ಇರುವ ಜಾಲಿ ಮರ ಕೂಡ ವಾದಿಗೆ ಸೇರುತ್ತದೆ , ನಾನು ನಮಗೆ ಸೇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 3 ದಾಖಲೆಯು ವಾದಿ ಖಾಜಾ ಹುಸೇನ್ ಅವರು ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಸರ್ವೆ ನಂಬರ್ 59 ರಲ್ಲಿ ಬೋರ್ ವೇಲ್ ಹಾಕಿಸಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಬೆಸ್ಕಾಂ ಇಲಾಖೆಯವರು ವಾದಿ ಖಾಜಾ ಹುಸೇನ್ ಅವರಿಗೆ ಸದರಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸರ್ವೆ ನಂಬರ್ 59 ರಲ್ಲಿ ಹಾಕಿಸಿದ ಬೋರ್ ವೇಲ್ ಗೆ ಸಂಬದಿಂಸಿದ ಹಾಗೆ RR .UIP4498 ರಂತೆ 5 ಹೆಚ್ ಪಿ ಸಾಮರ್ಥದ ವಿದ್ಯುತ್ ಕೊಳವೆ ಬಾವಿ ಸಂಪರ್ಕ ನೀಡಿರುತ್ತರೆ ಎಂದರೆ ಸರಿ. ಈಗ ಸಾಕ್ಷಿಗೆ ಈ ಸಂಬಂದವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಜಗಳೂರು ಅವರ ಪ್ರಮಾಣ ಪತ್ರ ತೋರಿಸಿದ್ದು , ಸಾಕ್ಷಿ ನೋಡಿ ಒಪ್ಪಿಕೊಂಡಿರುತ್ತಾರೆ ಸಾಕ್ಷಿ ನೋಡಿ ಒಪ್ಪಿಕೊಂಡ ದಾಖಲೆಯನ್ನು ನಿಪಿ **26** ಎಂದು ಗುರುತಿಸಲಾಯಿತು. ಸದರಿ ಬೋರ್ ವೇಲ್ ವಾದಿಯ ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸಾಕ್ಷಿ ಉತ್ತರ ಭಾಗಕ್ಕೆ ಇರುತ್ತದೆ ಎಂದು

ಹೇಳುತ್ತಾರೆ .

ನಾನು ವಾದಿ ಖಾಜಾ ಹುಸೇನ್ ಅವರು ಹಾಕಿಸಿದ ವಿದ್ಯುತ್ ಸಂಪರ್ಕದಿಂದ ಅಕ್ರಮವಾಗಿ ನಮ್ಮ ಜಮೀನಿನ ಅಡಿಕೆ ತೋಟಕ್ಕೆ ವಿದ್ಯುತ್ ಸಂಪರ್ಕ ಪಡೆದುಕೊಂಡಾಗ ಬೆಸ್ಕಾಂ ವಿಜಿಲೇನ್ಸ್ ಅವರು ಈ ಬಗ್ಗೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ವಾದಿ ಖಾಜಾ ಹುಸೇನ್ ಅವರು ದೂರು ನೀಡಿರುತ್ತಾರೆ, ವಿಜಿಲೇನ್ಸ್ ಅವರು ತನಿಖೆ ನಡೆಸಿ RR. 2229 ಸಂಬಂದವಾಗಿ ಸಂಪರ್ಕ ಇರುತ್ತದೆ ಎಂದು ತಿಳಿಸುತ್ತಾರೆ ಎಂದು ಹೇಳುತ್ತಾರೆ . ಈಗ ಸಾಕ್ಷಿಗೆ ವಾದಿಯವರು ನೀಡಿದ ದೂರಿನ ಬಗ್ಗೆ ಪ್ರತಿ ತೋರಿಸಿ ಸದರಿ ದೂರು ಇರುತ್ತದೆ ಎಂದು ನೋಡಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ನೋಡಿ ಒಪ್ಪಿಕೊಂಡ ದೂರನ್ನು ನಿಪಿ **27** ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಅಕ್ರಮವಾಗಿ ಬಳಸುತ್ತಿದ್ದ ವಿದ್ಯುತ್ ಸಂಪರ್ಕ ಕಡಿತಗೋಳಿಸಿ ಬೆಸ್ಕಾಂ ವಿಜಿಲೇನ್ಸ್ ಅವರು ನನಗೆ ಮತ್ತೇ ಹಾಕಬಾರದು ಎಂದು ತಿಳಿಸಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಬೆಸ್ಕಾಂ ವಿಜಿಲೇನ್ಸ್ ಅವರಿಗೆ ನಿಪಿ 27 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಸನ್ 2025 ರಲ್ಲಿ ನಮ್ಮ ಅಣ್ಣ ಪ್ರತಿವಾದಿ 1 ರವರು ಬೋರ್ ವೇಲ್ ಹಾಕಿಸಿರುತ್ತಾರೆ , ಅದರ ಸಂಪರ್ಕ ತಗೆದಿರುತ್ತಾರೆ ಹೊರತು , ನನಗೆ ಸೇರಿದ RR 2922 ಸಂಪರ್ಕ ತಗೆದಿರುವುದಿಲ್ಲ ಎಂದು ಹೇಳುತ್ತಾರೆ . ನನ್ನ ಅಣ್ಣ ಪ್ರತಿವಾದಿ 1 ರವರು ಹಾಕಿಸಿರುವ ಬೋರ್ ವೇಲ್ ಉದ್ದಗಟ್ಟೆ ಗ್ರಾಮದ ಸರ್ವೆ ನಂಬರ್ 59/ಪಿ ಜಮೀನಿನ ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದು ಹೇಳುತ್ತಾರೆ . ನನ್ನ ಅಣ್ಣ ಪ್ರತಿವಾದಿ 1 ರವರು ಯಾವುದೇ ಬೋರ್ ವೇಲ್ ಹಾಕಿಸಿರುವುದಿಲ್ಲ , ನಮ್ಮ ತಂದೆ ಹಾಕಿಸಿರುವ ಬೋರ್ ವೇಲ್ ಇರುತ್ತದೆ ಎಂದರೆ ಸರಿಯಲ್ಲ. ನಾವು ಸರ್ವೆ ನಂಬರ್ 59 ರಲ್ಲಿ ಒಟ್ಟು ಎಷ್ಟು ಬೋರ್ ವೇಲ್ ಹಾಕಿಸಿರುತೀರ ಎಂದರೆ ಸಾಕ್ಷಿ ನನ್ನ ತಂದೆ ಅಲ್ಲಾಭಕ್ಷಿ ಅವರು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 2010 ರಲ್ಲಿ ಹಾಕಿಸಿರುತ್ತಾರೆ . ಅದು ಭತ್ತಿ ಹೋದ ನಂತರ ಸನ್ 2013 ರಲ್ಲಿ ನಮ್ಮ ತಂದೆ ಮತ್ತು ನಾವು ಮತ್ತೊಂದು ಬೋರ್ ವೆಲ್ ನಮ್ಮ ಜಮೀನಿನ ಉತ್ತರ ಭಾಗಕ್ಕೆ ಹಾಕಿಸಿರುತ್ತೇವೆ ಎಂದು ಹೇಳುತ್ತಾರೆ . ಈ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದಾಖಲೆ ನೀಡಲು ಯಾವುದೇ ತೊಂದರೆ ಇರುವುದಿಲ್ಲ. ಉದ್ದಗಟ್ಟ ಗ್ರಾಮದ ವಿದ್ಯುತ್ ಸಂಪರ್ಕ ಹಾಕಿಸಿದ್ದಲ್ಲಿ ಸದರಿ ಸಂಪರ್ಕ UIP ಎಂದು

ಇರುತ್ತದೆ ಎಂದರೆ ಸರಿ. ನಿಪಿ 27 ರಲ್ಲಿ ನಾನು ಹನುಮಂತಾಪುರ ಗ್ರಾಮಕ್ಕೆ ಸೇರಿದ HMNIP ಬೋರ್ ವೇಲ್ ಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿದರು ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಬೆಸ್ಕಾಂ ವಿಜಿಲೇನ್ಸ್ ಅವರು ತನಿಖೆ ನಡೆಸಿ ಭಾವಚಿತ್ರಗಳನ್ನುಹಾಜರುಪಡಿಸಿದ ಬಗ್ಗೆ ಸಾಕ್ಷಿ ನೋಡಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ನೋಡಿ ಒಪ್ಪಿಕೊಂಡ ಭಾವಚಿತ್ರವನ್ನು ನಿಪಿ **28** ಎಂದು ಗುರುತಿಸಲಾಯಿತು. ನಿಪಿ 28 ಭಾವ ಚಿತ್ರದಲ್ಲಿ ನಾನು ಮತ್ತು ಬೆಸ್ಕಾಂ ವಿಜಿಲೇನ್ಸ್ ಅಧಿಕಾರಿಗಳು ಇರುತ್ತಾರೆ ಎಂದರೆ ಸರಿ. ಈಗ ಸಾಕ್ಷಿಗೆ ಬೆಸ್ಕಾಂ ವಿಜಿಲೇನ್ಸ್ ಅಧಿಕಾರಿಗಳು ತನ್ನ ಹೋಲದಲ್ಲಿ ಹಾಕಿಸಿರುವ ಬೋರ್ ವೆಲ್ ಮತ್ತು ವಿದ್ಯುತ್ ಸಂಪರ್ಕದ ಪ್ಯಾನಲ್ ಬೋರ್ಡ್ ದಬ್ಬಿಯನ ಭಾವಚಿತ್ರ ಬಗ್ಗೆ ತೋರಿಸಿದಾಗ ಸಾಕ್ಷಿ ನೋಡಿ ಒಪ್ಪಿಕೊಂಡಿರುತ್ತಾರೆ . ಸಾಕ್ಷಿ ಒಪ್ಪಿದ ಭಾವಚಿತ್ರವನ್ನು ನಿಪಿ **29** ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ವಾದಿಯವರು ದಾವಾ ಆಸ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಪಡೆದುಕೊಂಡ ಟಿ ಸಿ ಭಾವ ಚಿತ್ರ ಸೂಚಿಸಿದಾಗ , ಸಾಕ್ಷಿ ತಾವು ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಾಕಿಸಿದ ಬೋರ್ ವೆೇಲ್ ಗೆ ಸಂಬಂದವಾಗಿ ಇದ್ದ ಭಾವ ಚಿತ್ರ ಎಂದು ಹೇಳುತ್ತಾರೆ . ನಮ್ಮ ತಂದೆ ಹೆಸರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಹಾಕಿಸಿದ ಬೋರ್ ವೆಲ್ ಮತ್ತು ವಿದ್ಯುತ್ ಸಂಪರ್ಪಕದ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ . ಈಗ ಸಾಕ್ಷಿಗೆ ದಾವಾ ಆಸ್ತಿಯಲ್ಲಿ ವಾದಿ ಹಾಕಿಸಿರವ ಬೋರ್ ವೆಲ್ ಬಗ್ಗೆ ಭಾವ ಚಿತ್ರವನ್ನುಸೂಚಿಸಿದಾಗ ಸಾಕ್ಷಿ ತಮಗೆ ಸೇರಿದ ಬೋರ್ ವೇಲ್ ಇರುತ್ತದೆ ಎಂದು ಹೇಳುತ್ತದೆ . ಸದರಿ ಬೋರ್ ವೆಲ್ ನಮಗೆ ಸೇರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ನಿಡಿ 4 ಕಚ್ಚಾ ನಕಾಶೆ ಮಾಹಿತಿ ನಮ್ಮ ತಂದೆ ನೀಡಿರುತ್ತಾರೆ . ಅದರಲ್ಲಿರುವ ಸಹಿ ನಮ್ಮ ತಂದೆದು ಇರುತ್ತದೆ . ಸದರಿ ನಿಡಿ 4 ಕಚ್ಚಾ ನಕಾಶೆಯನ್ನು ನಮ್ಮತಂದೆ ದಾಖಲೆಗಳ ಆಧಾರದ ಮೇಲೆ ನಮಂ ವಕೀಲರಿಗೆ ತಯಾರಿಸಲು ಮಾಹಿತಿ ನೀಡಿರುತ್ತಾರೆ . ನಮ್ಮ ತಂದೆ ಜಮೀನಿನಲ್ಲಿ ನಾವು ಅನುಭವ ಇರುವ ಬಗ್ಗೆ ಪೈಪ್ ಲೈನ್ ಮತ್ತು ಬೋರ್ ವೇಲ್ ಆಧಾರದ ಮೇಲೆ ಮಾಹಿತಿ ತಿಳಿಸಿರುತ್ತಾರೆ . ನಮ್ಮ ತಂದೆ

ಸದರಿ ಸರ್ವೆ ನಂಬರ್ 59 ಸಂಬಂದವಾಗಿ ಸರ್ವೆ ದಾಖಲೆಗಳನು ನೋಡಿ ನಿಡಿ 4 ಕಚ್ಚಾ ನಕಾಶೆ ತಯಾರಿಸಲು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ನಿಡಿ 4 ರಲ್ಲಿ ಕಚ್ಚಾ ನಕಾಶೆಯಲ್ಲಿ ನಾವು ತೋರಿಸಿರುವ ಹಾಗೆ HGA ಇರುವ ಜಮೀನು ಸರ್ವೆ ನಂಬರ್ 9/1 ರೆಡ್ಡಿ ಹಳ್ಳಿ ಗ್ರಾಮದ್ದು ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 9/1 ಜಮೀನು ಪೂರ ವಿಸ್ತೀರ್ಣ ವಾದಿ ಖಾಜಾ ಹುಸೇನ್ ಗೆ ಸೇರುತ್ತದೆ ಎಂದರೆ ಸರಿ. ನಿಡಿ 4 ಕಚ್ಚಾ ನಕಾಶೆಯಲ್ಲಿ EF ಎಂದು ತೋರಿಸಿರುವ ಹಸಿರು ಬಣ್ಣದ ಯಾರ ಜಮೀನಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನ ಮತ್ತು ವಾದಿ ಇಬ್ಬರಿಗೂ ಸೇರಿದ್ದು , ಪೂರ್ವ ದಿಕ್ಕಿನ ಬೀಳುಬಿಟ್ಟ ಜಮೀನು ಎಂದು ಹೇಳುತ್ತಾರೆ . ವಾದಿ ತಮಗೆ ಸೇರಿದ ಜಮೀನು ಯಾವುದು ಬೀಳು ಬಿಟ್ಟಿರುವುದಿಲ್ಲ ಸಂಪೂರ್ಣ ಜಮೀನನ್ನು ಉಳುಮೆ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 4 ಕಚ್ಚಾ ನಕಾಶೆಯಲ್ಲಿ ABCD ಜಾಗವು ತಕರಾರಿನಲ್ಲಿ ತೋರಿಸಿರುವ ಹಾಗೆ ನಮಗೆ ಅನುಕೂಲವಾಗುವಂತೆ ನಾವೇ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 4 ರಂತೆ ವಾದಿ ಕೇವಲ CDH ಜಾಗದಲ್ಲಿ ಮಾತ್ರ ಸ್ವಾಧೀನ ಇರುತ್ತಾರೆ ಎಂದು ನನ್ನ ತಕರಾರಿನಲ್ಲಿ ಸುಳ್ಳು ತಿಳಿಸಿ ನಮಗೆ ಅನುಕೂಲವಾಗುವಂತೆ ನಾವೇ ನಿಡಿ 4 ಅನ್ನುತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ವಾದಿ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ತಿಳಿದರು ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 4 ರಲ್ಲಿ ಸರ್ವೆ ನಂಬರ್ 58/1 BKLM ಜಾಗ ನಮ್ಮ ತಂದೆಗೆ 2 ಎಕರೆ 35 ಗುಂಟೆ ಎಂದು ಸುಳ್ಳಾಗಿ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಡಿ 4 ರಲ್ಲಿ ತೋರಿಸಿರುವ R ಜಾಗ ನಾವು ನೀರಿನ ತೊಟ್ಟಿ ಕಟ್ಟಿರುತ್ತೇವೆ ಎಂದು ತಪ್ಪಾಗಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರು ಸದರಿ ನೀರಿನ ತೊಟ್ಟಿಯನ್ನು ಕಟ್ಟಿಸಿರುತ್ತಾರೆ ನಾವು ಕಟ್ಟಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯೇ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ದಾವಾ ಆಸ್ತಿ ಸರ್ವೆ ನಂಬರ್ 59 ರಲ್ಲಿ ಬೋರ್ ವೇಲ್ ಹಾಕಿಸಿ ಸದರಿ ನೀರಿನ ತೊಟ್ಟಿಗೆ ನೀರು ಬಿಟ್ಟು ಬಳಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 4 ಕಚ್ಚಾ ನಕಾಶೆಯಲ್ಲಿ ತೋರಿಸಿರುವ ಹಾಗೆ N ಎಂಬುದು ಬೋರ್ ವೇಲ್ ಮತ್ತು ವಾದಿಯವರಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿ. ನಾವು ನಿಡಿ 4 ರಲ್ಲಿ P ನಲ್ಲಿ ತೋರಿಸಿರುವ ಹಾಗೆ ವಿದ್ಯುತ್ ಟಿಸಿ V ನಲ್ಲಿ ತೋರಿಸಿರುವ ಹಾಗೆ ಬೋರ್ ವೇಲ್ ಕೂಡ ಸುಳ್ಳು ಇರುತ್ತದೆ , ನಮ್ಮ

ತಕರಾರಿಗೆ ಅನುಕೂಲವಾಗುವಂತೆ ನಿಡಿ 4 ನಾವೇ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಯಾವುದೇ ಗಂಗಾ ಕಲ್ಯಾಣ ಯೊಜನೆಯಡಿಯಲ್ಲಿ ಬೋರ್ ವೇಲ್ ಹಾಕಿಸಿರುವುದಿಲ್ಲ ವಿದ್ಯುತ್ ಸಂಪರ್ಕ ಪಡೆದಿರುವುದಿಲ್ಲ , ವಾದಿಗೆ ಸಂಬಂದಿಸಿದ ದಾವಾ ಆಸ್ತಿ ಜಮೀನು ಪಡೆಯಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೂ ಮತ್ತು ದಾವಾ ಆಸ್ತಿಗಳಿಗೂ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನಮಗೆ ನ್ಯಾಯಾಲಯದಿಂದ ಕೋರ್ಟ್ ಕಮಿಷನರ್ ನೇಮಕ ಮಾಡಿ ದಾವಾ ಆಸ್ತಿಗಳ ಬಗ್ಗೆ ಅಳತೆ ಮಾಡಿ ವರದಿ ನೀಡಲು ಯಾವುದೇ ತಕರಾರು ಇರುವುದಿಲ್ಲ . ನಮ್ಮ ತಕರಾರಿನಲ್ಲಿ ಮಾಹಿತಿ ನನಗೆ ಗೋತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನ್ಯಾಯಾಲಯಕ್ಕೆ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ፥</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು